ಸಾಧ್ಯವಿಲ್ಲ?

ನೋಡಿ ಇದು ಸರಳವಿದೆ. ನಾನು ಬಂಗಾಳಿ ಕಲಾವಿದ, ನಾನು ಕರ್ನಾಟಕ ಕಲಾವಿದ ಅಂತ ಗುರುತಿಸಿಕೊಳ್ಳಬೇಕೇ? ಇದು ಅತ್ಯಂತ ಹೀನಾಯ ಸ್ಥಿತಿ. ಒಬ್ಬ ಯುರೋಪಿನ ಕಲಾವಿದ ಜಗತ್ತಿನ ಕಲಾವಿದ ಆಗಲು ಸಾಧ್ಯವಿರುವುದಾದರೆ ನಮಗೇಕೆ ಸಾಧ್ಯವಿಲ್ಲ? ನೀವು ಕವಿಯಾಗಿದ್ದರೆ ಬೇಕಾದರೆ ಹೇಳಿಕೊಳ್ಳಿ – ನೀವು ಬಂಗಾಳಿ ಕವಿ, ಕನ್ನಡದ ಕವಿ ಅಂತ. ಆದರೆ ಚಿತ್ರಕಲಾ ಜಗತ್ತನ್ನು ಪ್ರಾದೇಶಿಕತೆಯಿಂದ ಅಳೆಯಲಾಗುವುದಿಲ್ಲ. ರವೀಂದ್ರನಾಥ ಟ್ಯಾಗೋರರು ಇದನ್ನು ಸರಿಯಾಗಿ ಹೇಳಿದ್ದರು; ನಾನು ಕವಿತೆ ಬರೆಯುವಾಗ ನನಗೆ ಬಂಗಾಳಿ ಶಬ್ದಗಳು ನುಗ್ಗಿ ಬರುತ್ತವೆ. ಕಾರಣ ನನ್ನ ಮಾತೃಭಾಷೆ ಬಂಗಾಳಿ. ಆದರೆ ನಾನು ಚಿತ್ರ ಬರೆಯುವಾಗ ನನಗೆ ನೆನಪಾಗುವ ಬಿಂಬಗಳು ಬಂಗಾಳಿ ಭಾಷೆಯಲ್ಲಿ ಬರುವುದಿಲ್ಲ. ಯುರೋಪಿನ ಕಲಾವಿದನಷ್ಟೇ ನಾನು ಕೂಡ ಜಗತ್ತಿನ ಕಲಾವಿದ ಅಂತ ಹೇಳಿದ್ದರು. ಇದೆಷ್ಟು ದೊಡ್ಡ ಮಾತಲ್ಲವೆ? ಚಿತ್ರಕಲೆಯನ್ನು ನೀವು ದೇಶದಿಂದ ಗುರುತಿಸಿಕೊಳ್ಳಲು ಸಾಧ್ಯವಿಲ್ಲ, ಇನ್ನು ಪ್ರಾಂತಗಳ ಮಾತು ಬಿಟ್ಟುಬಿಡಿ. ನಾವು ರಾಜ್ಯಕ್ಕೊಂದು ಲಲಿತಕಲಾ ಅಕಾಡೆಮಿ ಮಾಡಿದ್ದೇವೆ. ಅವರನ್ನು ಆಯಾ ರಾಜ್ಯದ ಕಲಾವಿದರಾಗಿ ರೂಪಿಸುತ್ತಿದ್ದೇವೆಯೇ ಹೊರತು ಜಗತ್ತಿನ ಕಲಾವಿದರಾಗಿ ರೂಪಿಸುತ್ತಿಲ್ಲ. ಒಂದು ರಾಜ್ಯದ ಕಲೆ ಇನ್ನೊಂದು ರಾಜ್ಯಕ್ಕೆ ಗೊತ್ತಿಲ್ಲ. ಇವತ್ತು ಈ ಪ್ರದೇಶದವರಿಗೆ ಪ್ರಶಸ್ತಿ ಕೊಡಿ, ನಾಳೆ ಆ ಪ್ರದೇಶದವರಿಗೆ ಪ್ರಶಸ್ತಿ ಕೊಡಿ. ಹಾಗಾದರೆ ಕಲೆಯ ಮಹತ್ವ ಎಲ್ಲಿ ಹೋಯಿತು? ಪ್ರಾದೇಶಿಕತೆ ನಮಗೊಂದು ಲಾಭದ ಸರಕಾಗಿಬಿಟ್ಟಿದೆ. ಕಲೆಯ ಸೀಮೆಗಳನ್ನು ಇನ್ನಷ್ಟು ಗಟ್ಟಿಗೊಳಿಸಿದೆ. ಇಂಥ ಮನಸ್ಥಿತಿ ಬೇಕೆ? ಕಲೆಯನ್ನು ನೋಡಿ ಕಲಾವಿದರನ್ನು ಗುರುತಿಸಬೇಕೇ ಹೊರತು ಪ್ರದೇಶವನ್ನು ನೋಡಿ ಅಲ್ಲ. ನೋಡಿ, ಈಗ ಸಾಹಿತ್ಯದಲ್ಲಿ ಏನಾಗಿಬಿಟ್ಟಿದೆ? ನಾವು ಮೊದಲು ಬಂಗಾಳಿ ಸಾಹಿತ್ಯದ ಶ್ರೇಷ್ಠ ಕಥೆಗಳ ಸಂಕಲನ ತರುತ್ತೇವೆ. ನಂತರ ನಮಗನಿಸುತ್ತದೆ, ಅನೇಕರಿಗೆ ಅವಕಾಶ ಸಿಗುತ್ತಿಲ್ಲ, ಪೂರ್ವ ಮತ್ತು ಪಶ್ಚಿಮ ಬಂಗಾಳದ ಶ್ರೇಷ್ಠ ಕಥೆಗಳ ಸಂಕಲನವನ್ನು ಪ್ರತ್ಯೇಕವಾಗಿ ತರುವೆವು. ಇದೂ ಕೂಡ ಸಮಾಧಾನ ಕೊಡುತ್ತಿಲ್ಲ. ನಂತರ ಕೊಲ್ಕತ್ತಾದ ಶ್ರೇಷ್ಠ ಕಥೆಗಳ ಸಂಕಲನ ಪ್ರಕಟಿಸುವೆವು. ಇದಾದ ನಂತರ ದಕ್ಷಿಣ ಕೊಲ್ಕೊತ್ತಾದ ಶ್ರೇಷ್ಠ ಕಥೆಗಳು. ಆಮೇಲೆ ರಾಸ್‌ಬಿಹಾರಿ ಕಾಲೋನಿಯ ಶ್ರೇಷ್ಠ ಕಥೆಗಳು. ಇದು ಯಾವ ಮಾನಸಿಕತೆ. ನಾವು ಎಲ್ಲಿಗೆ ಹೊರಡುತ್ತಿದ್ದೇವೆ. ತಮ್ಮ ತಮ್ಮ ಬರಹಗಳನ್ನು ಶ್ರೇಷ್ಠ ಕಥೆಗಳು ಅಂತ ಗುರುತಿಸಿಕೊಳ್ಳುತ್ತ ಹೋದರೆ ಇದಕ್ಕೇನಾದರೂ ಅಂತ್ಯವಿದೆಯೇ?. ಕೊನೆಗೆ ನಮ್ಮ ಕುಟುಂಬದ ಶ್ರೇಷ್ಠ ಕಥೆಗಳ ಸಂಕಲನ ತರಬೇಕಾಗುತ್ತದೆ. ಇಂಥ ಮಾನಸಿಕತೆಯೊಂದಿಗೆ ಹೊರಟಾಗ ನೀವು ಎಂಥ ಕಲಾಚಿಂತನೆ ರೂಪಿಸುತ್ತೀರಿ?

ನಮ್ಮ ಚಿತ್ರಗಳು ಕೋಟಿ ಕೋಟಿ ಗಳಿಸಬಹುದು ಆದರೆ ನಮ್ಮಲ್ಲಿ ಕಲಾಚಿಂತನೆ ಬೆಳೆಯಲು ಸಾಧ್ಯವಿಲ್ಲದಂಥ ಮಾನಸಿಕತೆಯನ್ನು ರೂಪಿಸಿದ್ದೇವೆ. ಯಾಕೆಂದರೆ, ನಮ್ಮ ಕಲಾವಿದರು ದೊಡ್ಡ ಜಾಲದಲ್ಲಿ ಸಿಲುಕಿಬಿಟ್ಟಿದ್ದಾರೆ. ಕಲಾಚಿಂತನೆ ಎಂದಾಕ್ಷಣ ಪಶ್ಚಿಮದ ಕಡೆ ನೋಡತೊಡಗುತ್ತಾರೆ. ನಮ್ಮ ಕಲೆಯನ್ನು ಜಗತ್ತಿನಲ್ಲಿ ಯಾರೂ ಗಂಭೀರವಾಗಿ ಚರ್ಚಿಸುವುದಿಲ್ಲ. ಚರ್ಚಿಲ್ ಎಷ್ಟು ಪ್ರಭಾವಶಾಲಿ ಅಂದರೆ ನಲವತ್ತು ದೇಶಗಳು ಅವರ ಚಿತ್ರದ ಅಂಚೆಚೀಟಿಗಳನ್ನು ಹೊರತಂದಿದ್ದಾರೆ. ನೋಟುಗಳ ಮೇಲೆ ಅವರ ಚಿತ್ರಗಳಿವೆ. ಆದರೆ ಯುರೋಪಿನಲ್ಲಿ ಯಾರಾದರೂ ಕಲಾವಿದರು ಚರ್ಚಿಲ್ ಪೇಂಟಿಂಗ್ ತೆಗೆದಿರುವುದನ್ನು ನೋಡಿದ್ದೀರಾ? ಆದರೆ ಭಾರತದಲ್ಲಿ ನಾವು ಎಂಥ ಪರಿಸ್ಥಿತಿ ನಿರ್ಮಿಸಿದ್ದೇವೆ? ಚಿತ್ರಕಲಾವಿದರಾಗುವ ಸಾಧ್ಯತೆಗಳನ್ನು ನಾವು ನಿರ್ನಾಮ ಮಡುತ್ತಿದ್ದೇವೆ. ನಾನು ಯಾವ ಸಂಘರ್ಷಗಳನ್ನು ಮಾಡುತ್ತಿದ್ದೇನೆಯೊ ಅದನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತಿದ್ದೇನೆ. ಜಗತ್ತಿನ ಶ್ರೇಷ್ಠ ಸಂಗತಿಗಳನ್ನು ನಾವು ಕಲಿಯಬೇಕಲ್ಲವೆ? ವಿಶ್ವವಿದ್ಯಾಲಯದ ವಿಮರ್ಶಕರ ಪ್ರಭುತ್ವ, ಯಾವುದೇ ಗುಂಪಿನ ವಿಮರ್ಶಕರ ಪ್ರಭುತ್ವ, ದೆಹಲಿಯ ಸೌತ್‌ಬ್ಲಾಕ್ ಬುದ್ಧಿಜೀವಿಗಳ ಪ್ರಭುತ್ವ, ಮುಖ್ಯಂತ್ರಿಗಳ ಕಚೇರಿಯಲ್ಲಿರುವ ಬುದ್ಧಿಜೀವಿಗಳ ಪ್ರಭುತ್ವ ಕಡಿಮೆ ಅಪಾಯಕಾರಿಯಲ್ಲ. ಅವರು ನಿರ್ದೇಶನ ಕೊಡತೊಡಗುತ್ತಾರೆ. ಇಂಥಲ್ಲಿ ಸಹಜ ಕಲಾವಿದರು ಉಸಿರಾಡುವುದು ಹೇಗೆ? ಕಲಾ ಜಗತ್ತಿನ ಈ ಅಪಾಯಗಳನ್ನು ನಾನು ಹೇಳುತ್ತಿರುವೆ.

ಒಬ್ಬ ಯುರೋಪಿನ ಕಲಾವಿದನಿಗೆ ಅಧ್ಯಕ್ಷ, ಪ್ರಧಾನಮಂತ್ರಿಯ ಕಚೇರಿ, ಇವುಗಳ ಜೊತೆ ಯಾವ